## ಕನ್ನಡ ಆವೃತ್ತಿ

### ಭಾಗ - ಎ

ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು. (2×5=10)

1. ಬಂಡವಾಳ ಸ್ವರೂಪದ ಬಗ್ಗೆ ನಿಮಗೇನು ಗೊತ್ತು ? ಬಂಡವಾಳ ಸ್ವರೂಪದ ನಾಲ್ಕು ಸಿದ್ಧಾಂತಗಳನ್ನು ಹೆಸರಿಸಿರಿ.
2. ನಗದು ನಿರ್ವಹಣೆ ಕುರಿತು ಟಿಪ್ಪಣಿ ಬರೆಯಿರಿ.
3. ಶೇರುಗಳ ನಮೂದೀಕರಣದ ಬಗ್ಗೆ ನಿಮಗೇನು ಗೊತ್ತು ? ನಮೂದೀಕರಣದ ವಿಧಾನವನ್ನು ಸಂಕ್ಷಿಪ್ತವಾಗಿ ವಿವರಿಸಿರಿ.
4. ರೂ. 10,00,000 ವೆಚ್ಚದ ಯೋಜನೆಯೊಂದು ಶೇ. 12 ರ ವಾರ್ಷಿಕ ಸವಕಳಿಯ ನಂತರ ಆದರೆ ಶೇ. 50 ರಷ್ಟು ತೆರಿಗೆ ಪೂರ್ವದ ವಾರ್ಷಿಕ 1,60,000 ರೂ.ಗಳಷ್ಟು ಲಾಭವನ್ನು ನೀಡುತ್ತದೆ. ಮರಳಿ ನೀಡುವ ಅವಧಿಯನ್ನು ಕಂಡುಹಿಡಿಯಿರಿ.

### ಭಾಗ - ಬಿ

ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ. ತಲಾ 10 ಅಂಕಗಳು. (3×10=30)

5. ಓವರ್ ದ ಕೌಂಟರ್ ಎಕ್ಸ್‌ಚೇಂಜ್ ಆಫ್ ಇಂಡಿಯಾ (ಓಟಿಸಿಇಐ)ದ ಉದ್ದೇಶ ಮತ್ತು ಲಕ್ಷಣಗಳನ್ನು ಚರ್ಚಿಸಿರಿ.
6. ಶೇರು ಮಾರುಕಟ್ಟೆಯಲ್ಲಿ ಕೆಲಸ ನಿರ್ವಹಿಸುವವರ ಕುರಿತು ವಿವರಿಸಿರಿ.
7. ಅಕ್ಷಯ ಕಂ. ನಿಯಮಿತವು ಯಂತ್ರವೊಂದನ್ನು ಖರೀದಿಸಲು ಯೋಜಿಸುತ್ತಿದೆ. ತಲಾ. ರೂ. 3,00,000 ಮೊತ್ತದ ಎರಡು ಬದಲಿ ಯಂತ್ರಗಳನ್ನು ಪರೀಕ್ಷೆಗಾಗಿ ಆಯ್ಕೆ ಮಾಡಲಾಯಿತು. ಕಂಪನಿಯ ಅಪೇಕ್ಷಿತ ಆದಾಯವು ಶೇ. 10 ಆಗಿರುತ್ತದೆ.

   ಹಣದ ಒಳಹರಿವು ಮತ್ತು ಸೋಡಿ ದರವು ಈ ರೀತಿ ಇರುತ್ತದೆ.

| ವರ್ಷ | ಹಣದ ಒಳಹರಿವು | | ಶೇ. 10 ರಂತೆ ಸೋಡಿ ದರ |
|---|---|---|---|
| | ಯಂತ್ರ ಎ | ಯಂತ್ರ ಬಿ | |
| 1 | 20,000 | 40,000 | 0.909 |
| 2 | 65,000 | 1,10,000 | 0.826 |
| 3 | 90,000 | 1,20,000 | 0.751 |
| 4 | 1,50,000 | 1,40,000 | 0.683 |
| 5 | 1,75,000 | 2,00,000 | 0.621 |

   ಎನ್ ಪಿ ವಿಯನ್ನು ಕಂಡುಹಿಡಿಯಿರಿ ಮತ್ತು ನಿಮ್ಮ ಸಲಹೆಗಳನ್ನು ನೀಡಿರಿ.

8. ಈ ಕೆಳಕಂಡ ಮಾಹಿತಿಗಳಿಂದ ಸಂಯುಕ್ತ ಸನ್ನೆಯ ಕ್ರಿಯೆಗಳನ್ನು ಕಂಡುಹಿಡಿಯಿರಿ ಮತ್ತು ಮಾರಾಟದಲ್ಲಾಗುವ ಶೇ. 10 ರ ಏರಿಕೆಯ ಪರಿಣಾಮಗಳನ್ನು ತೋರಿಸಿ.

| | | |
|---|---|---|
| ಮಾರಾಟ | ರೂ. | 2,00,000 |
| ಬದಲಾಗುವ ವೆಚ್ಚ | ರೂ. | 80,000 |
| ಸ್ಥಿರ ವೆಚ್ಚ | ರೂ. | 60,000 |
| ಬಡ್ಡಿ | ರೂ. | 20,000 |

9. ಸುಮನ್ ನಿಯಮಿತವು ಈ ಕೆಳಕಂಡ ಬಂಡವಾಳ ಸ್ವರೂಪವನ್ನು ಹೊಂದಿದೆ :

| | |
|---|---|
| 20,000 ಸಾಮಾನ್ಯ ಶೇರುಗಳು | ರೂ. 40,00,000 |
| ಶೇ. 10 ರ ಪ್ರಾಶಸ್ತ್ಯ ಶೇರುಗಳು | ರೂ. 10,00,000 |
| ಶೇ. 14 ರ ಸಾಲಪತ್ರಗಳು | ರೂ. 30,00,000 |

ಶೇರುಗಳ ಮಾರಾಟ ಬೆಲೆಯು ರೂ. 20 ಆಗಿದೆ. ಪ್ರತೀ ಶೇರಿನ ಲಾಭಾಂಶವು ರೂ. 2 ಆಗಿದ್ದು ಅದು ವಾರ್ಷಿಕ ಶೇ. 7 ರಂತೆ ಬೆಳೆಯುವುದು. ತೆರಿಗೆ ದರವು ಶೇ. 50 ಆಗಿದೆ.

ಸಾಮಾನ್ಯ ಶೇರುಗಳ ದರ, ಸಾಲದ ತೆರಿಗೆ ನಂತರದ ದರ ಮತ್ತು ಸರಾಸರಿ ತುಲನಾತ್ಮಕ ಬಂಡವಾಳ ದರವನ್ನು ಕಂಡುಹಿಡಿಯಿರಿ.

## ಭಾಗ – ಸಿ

ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ. **ಪ್ರತಿ ಪ್ರಶ್ನೆಗೆ 15 ಅಂಕಗಳು.** **(2×15=30)**

10. ಹಣಕಾಸು ನಿರ್ವಹಣೆಯ ವ್ಯಾಖ್ಯೆ ನೀಡಿರಿ. ಹಣಕಾಸು ನಿರ್ವಹಣೆಯ ಉದ್ದೇಶಗಳನ್ನು ಚರ್ಚಿಸಿರಿ.

11. ಶೇರು ಮಾರುಕಟ್ಟೆಯ ವ್ಯಾಖ್ಯೆ ನೀಡಿರಿ. ಶೇರು ಮಾರುಕಟ್ಟೆಯ ಕಾರ್ಯಗಳು ಮತ್ತು ಪಾತ್ರಗಳನ್ನು ವಿವರಿಸಿರಿ.

12. ಒಂದು ಕಂಪನಿಯ ದರ ಪಟ್ಟಿಯು ಈ ಕೆಳಕಂಡ ಮಾಹಿತಿಗಳನ್ನು ನೀಡುತ್ತದೆ.

1) ದರದ ಮೂಲಗಳು :

| | | |
|---|---|---|
| | ಸಾಮಗ್ರಿಗಳು | ಶೇ. 40 |
| | ನೇರ ಕೂಲಿ | ಶೇ. 20 |
| | ಮೇಲು ವೆಚ್ಚಗಳು | ಶೇ. 20 |

2) ಇತರ ವಿವರಗಳು ಈ ರೀತಿ ಇವೆ :

a) ಚಟುವಟಿಕೆಯ ಹಂತವನ್ನು 2,00,000 ವಸ್ತುಗಳಷ್ಟಿದಲು ತೀರ್ಮಾನಿಸಲಾಗಿದೆ.
b) ಕಚ್ಚಾ ಸಾಮಗ್ರಿಗಳು ಉಗ್ರಾಣದಲ್ಲಿ ಸರಾಸರಿ ಒಂದು ತಿಂಗಳ ಅವಧಿಯವರೆಗೆ ಇರಬಹುದಾಗಿದೆ.
c) ಸಾಮಗ್ರಿಗಳು ಸರಾಸರಿ ಅರ್ಧ ತಿಂಗಳು ಸಂಸ್ಕರಣೆಯಲ್ಲಿರುತ್ತದೆ.
d) ಮಾರಾಟ ಬೆಲೆಯು ಪ್ರತಿ ವಸ್ತುವಿಗೆ ರೂ. 12 ಆಗಿದೆ.
e) ಸಿದ್ಧವಸ್ತುಗಳು ಸರಾಸರಿ ಒಂದು ತಿಂಗಳ ಉಗ್ರಾಣದಲ್ಲಿರುತ್ತವೆ.
f) ಋಣಿಗಳಿಗೆ ನೀಡಿದ ಸಾಲದ ಅವಧಿ 2 ತಿಂಗಳುಗಳು.
g) ಪೂರೈಕೆದಾರರಿಂದ ನೀಡಿದ ಸಾಲದ ಅವಧಿ 1 ತಿಂಗಳುಗಳು.

ದುಡಿಮೆ ಬಂಡವಾಳದ ಅವಶ್ಯಕತೆಯ ಪಟ್ಟಿಯನ್ನು ತಯಾರಿಸಿರಿ.

13. ಈ ಕೆಳಕಂಡ ಮಾಹಿತಿಗಳಿಂದ ಪರಿಸ್ಥಿತಿ ಎ ಮತ್ತು ಬಿ ಯಲ್ಲಿ ಅನುಕ್ರಮವಾಗಿ ಹಣಕಾಸು ಯೋಜನೆ I ಮತ್ತು II ರ ಪ್ರಕಾರ ಹಣಕಾಸು ಸನ್ನೆ ಮತ್ತು ನಿರ್ವಹಣಾ ಸನ್ನೆಗಳನ್ನು ಕಂಡುಹಿಡಿಯಿರಿ.

| | | |
|---|---|---|
| ಮಾರಾಟ (ಪ್ರತಿ ವಸ್ತುವಿಗೆ ರೂ. 20) | | 800 ವಸ್ತುಗಳು |
| ಪ್ರತಿ ವಸ್ತುವಿಗೆ ಬದಲಾಗುವ ವೆಚ್ಚ | | ರೂ. 15 |
| ಸ್ಥಿರ ವೆಚ್ಚ: | ಪರಿಸ್ಥಿತಿ ಎ | ರೂ. 800 |
| | ಪರಿಸ್ಥಿತಿ ಬಿ | ರೂ. 1,500 |

| ಬಂಡವಾಳ ಸ್ವರೂಪ | ಹಣಕಾಸು ಯೋಜನೆ I | ಹಣಕಾಸು ಯೋಜನೆ II |
|---|---|---|
| ಸಾಮಾನ್ಯ ಬಂಡವಾಳ | ರೂ. 5,000 | ರೂ. 7,000 |
| ಸಾಲ | ರೂ. 5,000 | ರೂ. 2,000 |
| ಸಾಲದ ದರ | ಶೇ. 10 | ಶೇ. 10 |